ವರ್ಷದಲ್ಲಿ ಈ ಎಲ್ಲ ಬ್ಯಾಕ್‌ಲಾಗನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಸ್. ತಮ್ಮಣ್ಣ:– ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಕರ್ನಾಟಕ ಹಣಕಾಸು ಸಂಸ್ಥೆಯಿಂದ ಮುಕ್ಕಾಲು ಪಾಲು ಹಣಕಾಸು ಪಡೆದಿದ್ದಾರೆ. ಈ ಹಣಕಾಸು ಸಂಸ್ಥೆಯವರು ಮಾರ್ವಾಡಿಗಳಿಗಿಂತ ಹೆಚ್ಚಾಗಿ ಒಂದು ಕಂತು ಕಟ್ಟದಿದ್ದರೆ ಕಾರ್ಖಾನೆಗಳಿಗೆ ಬೀಗಮುದ್ರೆ ಹಾಕುತ್ತಾರೆ. ಅವರಿಗೆ ಏನಾದರೂ ಮಾನ್ಯ ಸಚಿವರು ಡೈರೆಕ್ಷನ್ ಕೊಡುವುದಕ್ಕಾಗುತ್ತದೆಯೇ ? ಸಬ್ಸಿಡಿ ರಿಲೀಸ್ ಆಗುವವರೆಗೆ ನೀವು ಬೀಗಮುದ್ರೆಯನ್ನು ಹಾಕಬೇಡಿಯೆಂದು ಏನಾದರೂ ಮಾರ್ಗದರ್ಶನ ನೀಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:– ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ನಾನು ಈಗಾಗಲೇ ಹೇಳಿದ ಹಾಗೆ, 1993–94ರಲ್ಲಿ ನಾವೇನು ಕೊಡಬೇಕಾಗಿದೆ ಬ್ಯಾಕ್‌ಲಾಗ್ ಸಹಾಯಧನ ರೂಪದಲ್ಲಿ, ಅದನ್ನೆಲ್ಲ ನಾವು ಈ ವರ್ಷ ಮುಗಿಸುತ್ತಿದ್ದೇವೆ. ಈ ವರ್ಷ 1ಲಕ್ಷಕ್ಕಿಂತ ಕೆಳಗೆ ಇರತಕ್ಕ ಸಬ್ಸಿಡಿಯನ್ನು ಆದಷ್ಟು ಅದೇ ವರ್ಷದಲ್ಲಿ ರಿಲೀಸ್ ಮಾಡಬೇಕೆಂದು ಒಂದು ಯೋಜನೆಯನ್ನು ಈ ವರ್ಷದಲ್ಲಿ ನಾವು ಜಾರಿಗೆ ತರುತ್ತಿದ್ದೇವೆ.

ಕೆರೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಕುರಿತು

2106: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕೆರೂರು ನಗರದಲ್ಲಿ ಕುಡಿಯುವ ನೀರಿನ ಪೂರೈಕೆಯ ಮೂಲಗಳು ಯಾವುದು;

2. ಕುಡಿಯುವ ನೀರಿನ ತೊಂದರೆ ಇದ್ದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

3. ಗಮನಕ್ಕೆ ಬಂದಿದ್ದರೆ ಈ ತೊಂದರೆ ನಿವಾರಿಸಲು ಕೈಗೊಂಡ ಕ್ರಮವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಕೆರೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಯ ಮೂಲಗಳು 2 ತೆರೆದ ಬಾವಿಗಳು ಮತ್ತು 16 ಕೊಳವೆ ಬಾವಿಗಳು 11 ಕೊಳವೆ ಬಾವಿ ಮತ್ತು 2 ತೆರೆದ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪ್‌ನ್ನು ಅಳವಡಿಸಲಾಗಿದೆ. ಉಳಿದ 5 ಕೊಳವೆ ಬಾವಿಗಳಿಗೆ ಕೈಪಂಪನ್ನು ಅಳವಡಿಸಲಾಗಿದೆ.

2. ಹೌದು.

3. 1992-93ನೇ ಸಾಲಿನ ಅಭಾವ ಕಾಮಗಾರಿಕೆಗಳ ಅಡಿಯಲ್ಲಿ 9 ಕೊಳವೆ ಬಾವಿಗಳನ್ನು ತೋಡಲಾಗಿದೆ. ಅವುಗಳಲ್ಲಿ 7 ಕೊಳವೆ ಬಾವಿಗಳು ಫಲಪ್ರದವಾಗಿದ್ದು, 4 ಕೊಳವೆ ಬಾವಿಗಳಿಗೆ ಕೈ ಪಂಪನ್ನು ಮತ್ತು 3 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಲಾಗಿದೆ. ಇದು ಅಲ್ಲದೆ ಹೆಚ್ಚು ಒರೆತ ಇರುವ ಹಾಲಿ 2 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ಕಿರು ನೀರು ಸರಬರಾಜು ಮುಖಾಂತರ ನೀರನ್ನು ವಿತರಿಸಲಾಗುತ್ತಿದೆ. 1992–93ನೇ ಸಾಲಿನ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಾಲಿ ಇರುವ ಒಂದು ಕೊಳವೆ ಬಾವಿಗೆ ಕೊಳವೆ ಮಾರ್ಗವನ್ನು ಅಳವಡಿಸಿ ಕುಡಿಯುವ ನೀರಿನ ತೊಂದರೆ ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ಇದು ಅಲ್ಲದೇ ಇನ್ನಷ್ಟು ಕೊಳವೆ ಬಾವಿಗಳನ್ನು ತೋಡಿ ಅವುಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ನೀರು

ಸರಬರಾಜನ್ನು ಹೆಚ್ಚುವರಿಗೊಳಿಸಲು ಸುಮಾರು 37.80ಲಕ್ಷ ರೂಪಾಯಿಗಳ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದೆ.

ಶ್ರೀ ಎಂ.ಕೆ. ಪಟ್ಟಣ್ಣಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಕೆರೂರು ಸುಮಾರು 16–18ಸಾವಿರ ಜನಸಂಖ್ಯೆಯುಳ್ಳ ನಗರಸಭೆ. ಈಗಾಗಲೇ ಅಲ್ಲಿ ನಾಲ್ಕೈದು ದಿನಗಳಿಗೊಮ್ಮೆ ನೀರು ಪೂರೈಸುತ್ತಿದ್ದಾರೆ. ಮುಖ್ಯವಾಗಿ ಅವರು ಹೇಳಿದಂತಹ ಉತ್ತರವನ್ನು ನೋಡಿದರೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಇದ್ದ ಕೊಳವೆ ಬಾವಿಗಳು ವಿಫಲವಾಗಿ ಅಲ್ಲಿ ನೀರಿನ ತೊಂದರೆಯಿದೆ. ಈ ಕಾರಣ ಅಲ್ಲಿ ಮಾನ್ಯ ಸಚಿವರು ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಕೊರೆಸಬೇಕು. ಅದರಂತೆ ನೀವು 37ಲಕ್ಷದ 80ಸಾವಿರ ರೂಪಾಯಿ ಏನೊಂದು ಯೋಜನೆಯನ್ನು ತೆಗೆದುಕೊಂಡಿದ್ದಾರೆ ಅದನ್ನು ಯಾವಾಗ ಕೈಗೊಳ್ಳುತ್ತೀರಿ ? ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕೆರೂರು ನಗರದಿಂದ ಸುಮಾರು 15ಕಿಲೋಮೀಟರ್ ದೂರದಲ್ಲಿ ಹರಿಯತಕ್ಕ ಮಲಪ್ರಭಾ ನದಿಗೆ ಒಂದು ಖಾಯಂ ಅದ ನೀರು ಸರಬರಾಜು ಮಾಡುವ ಯೋಜನೆಯನ್ನು ಕೈಗೆ ಎತ್ತಿಕೊಳ್ಳುತ್ತೀರಾ ? ಈ ದಿಸೆಯಲ್ಲಿ ತಾವು ಉತ್ತರ ಕೊಡುತ್ತೀರಿ ಎಂದು ನಾನು ಆಸೆ ಇಟ್ಟುಕೊಂಡಿದ್ದೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೆ, 1972ರಲ್ಲಿ ಎನ್‌ಆರ್‌ಇಡಬ್ಲ್ಯೂ ಸ್ಕೀಮ್‌ನಲ್ಲಿ ಇದು ಸ್ಟಾರ್ಟ್ ಆಗಿತ್ತು. ಅದರಲ್ಲಿ 2 ಓಪನ್‌ವೆಲ್ಸ್, 16 ಬೋರ್‌ವೆಲ್ ತೋಡಿಸಿ ಇದರಿಂದ ನೀರನ್ನು ಪಂಪ್ ಮಾಡಲಾಗುತ್ತಿತ್ತು. ಆಮೇಲೆ 16 ಬೋರ್‌ವೆಲ್‌ಗಳಲ್ಲಿ 11ಕ್ಕೆ ಪಂಪ್‌ಗಳನ್ನು ಫಿಕ್ಸ್ ಮಾಡಿದ್ದೇವೆ. ಅಲ್ಲಿಂದ ನೀರು ಬರುತ್ತಿದೆ. ಈಗ ಏನಾಗಿದೆ ಎಂದರೆ, ಊರು ಬೆಳೆದು ನೀರಿಗೆ ತೊಂದರೆಯಾಗುತ್ತಿದೆ; ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದಕ್ಕೋಸ್ಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಹೊಸ ಸ್ಕೀಮ್‌ನ್ನು ತಯಾರು ಮಾಡಿದ್ದೇವೆ. 37.8ಲಕ್ಷ ರೂಪಾಯಿಗಳ ಸ್ಕೀಮ್‌ನ್ನು ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಇಟ್ಟು, ಅದನ್ನು ಅಪ್ರೂವ್ ಮಾಡಿಸಿ ಬೇಗನೆ ಅದನ್ನು ಕಾರ್ಯರೂಪಕ್ಕೆ ತರುತ್ತೇನೆ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– 37.8 ಲಕ್ಷ ರೂಪಾಯಿಗಳ ಯೋಜನೆ ಕೂಡ ತಾತ್ಕಾಲಿಕ ವ್ಯವಸ್ಥೆಯಾಗುತ್ತದೆ. ಖಾಯಂ ಆಗಿ ನೀರು ಬರತಕ್ಕಂಥ ಯೋಜನೆ, ಮಲಪ್ರಭಾ ವಿಚಾರ ಏನು ಮಾಡಿದ್ದೀರಿ ?

ಶ್ರೀ ಚೌಡರೆಡ್ಡಿ:– ಮಲಪ್ರಭಾ ವಿಚಾರದಲ್ಲಿ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ನನ್ನ ಹತ್ತಿರ ಮಾತನಾಡಲಿ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳೋಣ. ಖಾಯಂ ಆಗಿ ಪರಿಹಾರ ಮಾಡಿದರೆ ಒಳ್ಳೆಯದೆಂದು ನಾನು ಕೂಡ ಒಪ್ಪುತ್ತೇನೆ.

ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಕುಡಿಯುವ ನೀರಿನ ಅಭಾವ ಕುರಿತು

2059: ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಾಗೂ ಗೃಹ ಮಂಡಳಿಯವರ ಲೇಔಟ್‌ಗಳು ಇರುವುದು ನಿಜವೇ;

ಆ. ಈ ಲೇಔಟ್‌ನಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವವಿರುವುದು ನಿಜವಲ್ಲವೇ;

ಇ. ಹಾಗಿದ್ದಲ್ಲಿ ಸದರಿ ಲೇಔಟ್‌ಗೆ ಕಾವೇರಿ ನೀರನ್ನು ಸರಬರಾಜು ಮಾಡುವ ಬಗ್ಗೆ ಸರ್ಕಾರದವರು ಕ್ರಮವೇನನ್ನಾದರೂ ಕೈಗೊಂಡಿರುವರೇ;